# ಅಂಗನವಾಡಿ ಕಾರ್ಯಕರ್ತೆಗಳಲ್ಲಿ ಇರಬೇಕಾದ ಅವಶ್ಯಕ ಕೌಶಲ್ಯತೆಗಳು

## ಪರಿಚಯ

- ಅಂಗನವಾಡಿ ಕಾರ್ಯಕರ್ತೆಗಳಲ್ಲಿ ಇರಬೇಕಾದ ಕೌಶಲ್ಯತೆಗಳನ್ನು ಆರು ಪ್ರಕಾರಗಳಾಗಿ ವರ್ಗೀಕರಿಸಲಾಗಿದೆ. ಇವುಸರಳವಾಗಿದ್ದು, ಕಲಿಯುವುದಕ್ಕೆ ಕೆಲವೇ ಗಂಟೆಗಳು ಸಾಕು ಮತ್ತು ಇದರಿಂದ ಸಾವಿರಾರು ಜೀವಗಳನ್ನು ಉಳಿಸಬಹುದು.
- ಕೌಶಲ್ಯತೆಗಳ ಆರು ಪ್ರಕಾರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ:

### 1. ಮುಖಂಡತ್ವ

- ಮುಖಂಡ ಅನಿಸಿದವರು ಗುಂಪಿನ ಮುಂದಾಳತ್ವ ವಹಿಸಿ ಮುಂದಕ್ಕೆ ಕೊಂಡೊಯ್ಯುತ್ತಾರೆ ಹಾಗೂ ಗುಂಪಿನ ಇತರ ಸದಸ್ಯರನ್ನು ಸೇರಿಸಿ ಕೆಲಸ ಮಾಡುತ್ತಾರೆ.
- ಕೆಲವರು ಹುಟ್ಟಿನಿಂದಲೇ ಮುಖಂಡರಾಗಿರುತ್ತಾರೆ, ಇನ್ನು ಕೆಲವರು ಮತ್ತೆ ತಯಾರಾಗುತ್ತಾರೆ.
- ಜನರ ನಂಬಿಕೆ ಮತ್ತು ವರ್ತನೆಗಳ ಮೇಲೆ ಪ್ರಭಾವ ಬೀರುವುದು, ಕೆಲಸ ಮಾಡುತ್ತಿರುವ ತಂಡದಿಂದ ತನ್ನ ಉದ್ದೇಶಿತ ಕಾರ್ಯಗಳನ್ನು ನೆರವೇರಿಸುವುದು ಮೊದಲಾದ ಸತತ ಪ್ರಕ್ರಿಯೆಯನ್ನು ಮುಖಂಡತ್ವ ಎಂದು ಕರೆಯುತ್ತೇವೆ.
- ಮುಖಂಡರಲ್ಲಿ ಈ ಕೆಳಗಿನ ಗುಣ ಲಕ್ಷಣಗಳಿರಬೇಕು
  - ಆತ್ಮವಿಶ್ವಾಸ ಹೊಂದಿರಬೇಕು, ಅಂದರೆ ತನ್ನ ಮೇಲೆ ನಂಬಿಕೆ ಮತ್ತು ಭರವಸೆ ಇರಬೇಕು.
  - ಶಾಂತವಾಗಿ ಮತ್ತು ಆತ್ಮವಿಶ್ವಾಸದಿಂದ ಇರುವ ಕಾರಣದಿಂದಾಗಿ ತಂಡಕ್ಕೂ ಕೂಡಾ ಅದೇ ಅನುಭವ ಉಂಟಾಗುತ್ತದೆ ಹಾಗೂ ಇದು ಪ್ರತಿಯೊಬ್ಬರಿಗೂ ಕೆಲಸ ಮಾಡುವಂತೆ ಪ್ರೇರಣೆ ನೀಡುತ್ತಾ ಮುಂದಕ್ಕೆ ಹೋಗುವುದಕ್ಕೆ ಅನುಕೂಲ ಮಾಡಿ ಕೊಡುತ್ತದೆ.
  - ಉತ್ತಮವಾದ ಸಂಪರ್ಕ ಕೌಶಲ್ಯತೆಗಳು, ಸಾಮಾಜಿಕ ಕೌಶಲ್ಯತೆಗಳು, ಆದ್ಯತೆಗಳನ್ನು ಗುರುತಿಸುವ ಕೌಶಲ್ಯತೆಗಳು, ಮೂಲ ವಿಚಾರಗಳ ತಿಳುವಳಿಕೆ ಮತ್ತು ಕ್ರಿಯಾಶೀಲವಾಗಿ ಚಿಂತಿಸುವ ಸಾಮರ್ಥ್ಯವನ್ನು ಹೊಂದಿರಬೇಕು.
  - ಸದಾ ಉತ್ಸಾಹದಿಂದಿರಬೇಕು, ಪ್ರಾಮಾಣಿಕವಾಗಿರಬೇಕು, ಆಶಾವಾದಿಯಾಗಿರಬೇಕು, ವಿಚಾರಗಳಲ್ಲಿ ಖಚಿತತೆ ಇರಬೇಕು, ಯಾವುದೇ ವ್ಯಯುಕ್ತಿಕ ಭಾವನೆಗಳಿಂದ ಪ್ರಬಾವಿತಗೊಳ್ಳಬಾರದು ಮತ್ತು ಸತ್ಯಾಂಶಗಳನ್ನು ನಿಷ್ಪಕ್ಷವಾಗಿ ಸಾದರಪಡಿಸುವ ಸಾಮರ್ಥ್ಯ ಹೊಂದಿರಬೇಕು.



### 2. ಸಂಪರ್ಕ ಕೌಶಲ್ಯತೆಗಳು

- ಸಮುದಾಯವನ್ನು ಸಂಪರ್ಕಿಸುವಾಗ, ಮಾತನಾಡುತ್ತಿರುವಾಗ ಜಾತಿ/ವರ್ಗಗಳ ಆಧಾರದಲ್ಲಿ ಯಾವತ್ತೂ ಭೇದ ಭಾವ ಮಾಡಬಾರದು.
- ಅವರೊಂದಿಗೆ ಘನತೆ ಮತ್ತು ಗೌರವದಿಂದ ಮಾತನಾಡಬೇಕು.
- ಇತರರಿಗೂ ಕೂಡಾ ತಮ್ಮ ವಿಚಾರಗಳನ್ನು ತಿಳಿಸಲು ಅಥವಾ ಹಂಚಿಕೊಳ್ಳಲು ಅವಕಾಶ ಒದಗಿಸಬೇಕು.
- ತ್ವರಿತವಾಗಿ ಪ್ರತಿಕ್ರಿಯೆ ನೀಡಬಾರದು. ಆಲೈಸಬೇಕು, ಅರ್ಥ ಮಾಡಿಕೊಳ್ಳಬೇಕು, ವಿಶ್ಲೇಷಿಸಬೇಕು ಮತ್ತು ಬಳಿಕ ಪ್ರತಿಕ್ರಿಯೆ ನೀಡಬೇಕು.
- ಯಾವುದೇ ವಿಷಯಗಳನ್ನು ಇದು ಸರ್ವೇ ಸಾಮಾನ್ಯ ಎಂದು ಹೇಳಬಾರದು. ನೀವು ನಿರ್ಧಿಷ್ಟವಾಗಿ ಏನನ್ನು ಬಯಸುತ್ತೀರಿ ಅಥವಾ ಬಯಸುವುದಿಲ್ಲ, ಏನನ್ನು ನೀವು ಬದಲಾಯಿಸಲು ಬಯಸುತ್ತೀರಿ ಅಥವಾ ಏನನ್ನು ಮುಂದುವರಿಸಲು ಬಯಸುತ್ತೀರಿ ಎನ್ನುವುದು ಸ್ಪಷ್ಟವಾಗಿರಬೇಕು.
- ಸವಿವರವಾದ ಮಾಹಿತಿಗಳಿಗಾಗಿ ಈ ಮಾಲಿಕೆಯಲ್ಲಿ ಸಂವಹನಾ ಕೌಶಲ್ಯದ ಕುರಿತು ಇರುವ ಕರಪತ್ರವನ್ನು ನೋಡಿರಿ.

## 3. ನಿರ್ಧಾರ ಕೈಗೊಳ್ಳುವ ಕೌಶಲ್ಯತೆಗಳು

ನಿರ್ಧಾರ ಕೈಗೊಳ್ಳುವುದು ಕೆಲವೊಂದು ಮೂಲ ಕ್ರಮಗಳನ್ನು ಒಳಗೊಂಡಿದೆ ಇವುಗಳೆಂದರೆ:

- **ಸಮಸ್ಯೆಯನ್ನು ನಿರೂಪಿಸಬೇಕು:** ಪರಿಸ್ಥಿತಿಯನ್ನು ಜಾಗರೂಕತೆಯಿಂದ ಅವಲೋಕಿಸಬೇಕು ಹಾಗೂ ಅಲ್ಲಿನ ಮೂಲ ಸಮಸ್ಯೆಯನ್ನು ಅರಿತುಕೊಳ್ಳಬೇಕು.
- **ಮಾಹಿತಿಗಳನ್ನು ಸಂಗ್ರಹಿಸಬೇಕು:** ಎಲ್ಲಾ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಬೇಕು, ಸಂಬಂಧಪಟ್ಟ ಅಧಿಕಾರಿಗಳಿಂದ ಸೂಕ್ತವಾದ ಸಲಹೆಯನ್ನು ಪಡೆಯಬೇಕು ಮತ್ತು ಇದರಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಬೇಕು.
- **ಪರ್ಯಾಯವಾಗಿ ಯೋಚಿಸಬೇಕು:** ಸಮುದಾಯದ ಸಭೆ ಏರ್ಪಡಿಸಬೇಕು ಹಾಗೂ ಸಮಸ್ಯೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವುದಕ್ಕಾಗಿ ಕೆಲಸ ಮಾಡಿರುವ ಜನರೊಂದಿಗೆ ಪರಿಸ್ಥಿತಿಯನ್ನು ಚರ್ಚಿಸಬೇಕು.
- ಲಭ್ಯವಿರುವ ಹಲವಾರು ಆಯ್ಕೆಗಳಿಂದ ಒಂದನ್ನು ಆಯ್ಕೆ ಮಾಡಬೇಕು.
- ನಿರ್ಧಾರವನ್ನು ತಕ್ಷಣವೇ ಕಾರ್ಯ ರೂಪಕ್ಕೆ ತರಬೇಕು.

ಸರಿಯಾದ ನಿರ್ಧಾರ ಈ ಪ್ರಕಾರವಾಗಿರಬೇಕು

- ಗುಂಪಿನ ಸದಸ್ಯರಲ್ಲಿ ಯಾವುದೇ ಅಸಂತೃಪ್ತಿ ಅಥವಾ ಅಸಮಾಧಾನ ತರಬಾರದು.
- ವಾಸ್ತವವಾಗಿ ಅನುಷ್ಠಾನಗೊಳಿಸುವಂತಿರಬೇಕು.
- ನಿರ್ಧಾರವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಗುಂಪಿನ ಸದಸ್ಯರನ್ನು ತೊಡಗಿಸಿಕೊಳ್ಳಬೇಕು.

## 4. ಸಂಧಾನ ಕೌಶಲ್ಯತೆಗಳು

ಸಂಧಾನವು ಯಶಸ್ವಿಯಾಗಲು ಈ ಕೆಳಗಿನ ವಿಷಯಗಳು ಬಹುಮುಖ್ಯ

- **ಇತರ ವ್ಯಕ್ತಿಯ ಭಾವನೆ–ವಿಚಾರಗಳನ್ನು ತಿಳಿದುಕೊಳ್ಳಬೇಕು –** ಸಂಧಾನ ಪ್ರಕ್ರಿಯೆಯಲ್ಲಿ ಇತರ ವ್ಯಕ್ತಿಗಳ ಕಾಳಜಿಗಳು ಮತ್ತು ಅವರಲ್ಲಿರಬಹುದಾದ ಆತಂಕಗಳನ್ನು ಅರಿತುಕೊಳ್ಳುವುದಕ್ಕಾಗಿ ಅವರಲ್ಲಿ ಪ್ರಶ್ನೆಗಳನ್ನು ಕೇಳಿ ಅವರ ಭಾವನೆಗಳನ್ನು ತಿಳಿದುಕೊಳ್ಳಬೇಕು.
- **ನಿಮ್ಮ ಅಗತ್ಯತೆಗಳನ್ನು ತಿಳಿಸಬೇಕು –** ನಿಮ್ಮ ಅಗತ್ಯತೆ ಏನು ಮತ್ತು ಅದು ಯಾಕಾಗಿ ಅಗತ್ಯವಾಗಿದೆ ಎಂಬುದನ್ನು ತಿಳಿಸುವುದು ಅತ್ಯಂತ ಪ್ರಾಮುಖ್ಯವಾಗಿದೆ.
- ಮುಂಚೆಯೇ ಪರ್ಯಾಯ ಆಯ್ಕೆಗಳನ್ನು ತಯಾರು ಮಾಡಿಕೊಳ್ಳಬೇಕು.
- **ವಾದ ಮಾಡಬಾರದು –** ಒಂದು ವೇಳೆ ಯಾವುದೇ ವಿಚಾರವನ್ನು ನೀವು ಒಪ್ಪುತ್ತಿಲ್ಲವಾದಲ್ಲಿ, ನಿಮಗೆ ಇಷ್ಟವಿಲ್ಲವಾದುದನ್ನು ಹಿತಕರವಾಗಿ ಮತ್ತು ಖಚಿತವಾಗಿ ತಿಳಿಸಬೇಕು.
- ನೀವು ಅವರನ್ನು ಸೋಲಿಸಿದ್ದೀರಿ ಅಥವಾ ಕೆಳ ಮಟ್ಟಕ್ಕೆ ಇಳಿಸಿದ್ದೀರಿ ಎಂಬ ಭಾವನೆ ಅವರಲ್ಲಿ ಬಾರದಂತೆ ನೋಡಿಕೊಳ್ಳಬೇಕು.
- ಯಾವಾಗಲೂ ಅಪರಿಮಿತ ತಾಳ್ಮೆಯನ್ನು ವ್ಯಕ್ತಪಡಿಸಬೇಕು.



## 5. ಸಮನ್ವಯ ಏರ್ಪಡಿಸುವ ಕೌಶಲ್ಯತೆಗಳು:

- ಅಂಗನವಾಡಿ ಕಾರ್ಯಕರ್ತೆಯಾಗಿ ನೀವು ಆರೋಗ್ಯ ಸೇವೆ ಒದಗಿಸುವವರು ಮತ್ತು ಸಮುದಾಯದ ನಡುವೆ ಸಂಪರ್ಕ ಕೊಂಡಿಯಾಗಿರುತ್ತೀರಿ.
- ಆದ್ದರಿಂದ, ಸಂಬಂಧಪಟ್ಟ ಎಲ್ಲರೊಂದಿಗೆ ಹಾಗೂ ಸಮುದಾಯದೊಂದಿಗೆ ನೀವು ನಿರಂತರವಾಗಿ ಸಮನ್ವಯ ನಡೆಸಬೇಕಾದ ಅಗತ್ಯವಿರುತ್ತದೆ.
- ಗರಿಷ್ಠವಾದ ಫಲಿತಾಂಶ ಪಡೆಯುವುದಕ್ಕಾಗಿ ಆರೋಗ್ಯ ಮತ್ತು ಪೌಷ್ಠಿಕಾಂಶ ಚಟುವಟಿಕೆಗಳನ್ನು ಜೊತೆಯಾಗಿ ಯೋಜಿಸಬೇಕು.
- ಗ್ರಾಮೀಣ ಮಟ್ಟದಲ್ಲಿ ಸ್ನೇಹ ಶಿಬಿರ ಸೇರಿಸಿ ಮತ್ತು ಗ್ರಾಮೀಣ ಆರೋಗ್ಯ ಮತ್ತು ಪೌಷ್ಠಿಕಾಂಶ ದಿನಾಚರಣೆ ಏರ್ಪಡಿಸಿ.
- ಸಮನ್ವಯ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಸದಸ್ಯರೂ ಕೂಡಾ ಪ್ರಮುಖ ಪಾತ್ರ ವಹಿಸುತ್ತಾರೆ. ಸಂಬಂಧಪಟ್ಟಿರುವ ಎಲ್ಲರೊಂದಿಗೂ ನೀವು ಸಂಪರ್ಕದಲ್ಲಿದ್ದಿರಿ, ನಡೆಯುತ್ತಿರುವ ಬೆಳವಣಿಗೆ ಕುರಿತಂತೆ ಸೂಕ್ತವಾದ ಮಾಹಿತಿಗಳನ್ನು ನೀಡಿರಿ.
- ಸಭೆಯನ್ನು/ಯಾವುದೇ ಚಟುವಟಿಕೆಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ಇತರರ ಸಹಾಯ ಪಡೆಯುವುದಕ್ಕೆ ಯಾವತ್ತೂ ಸಂಕೋಚ ಮಾಡಬಾರದು.

## 6. ಒಗ್ಗೂಡಿಸುವಿಕೆಗೆ ಬೇಕಾದ ಕೌಶಲ್ಯತೆಗಳು

- ಮಹಿಳೆಯರ ಗುಂಪು ಸಭೆಗಳು ಮತ್ತು ವಿ.ಎಚ್.ಎಸ್.ಎನ್.ಸಿ. ಸಭೆಗಳನ್ನು ಏರ್ಪಡಿಸಬೇಕು.
- ಗ್ರಾಮೀಣ ಆರೋಗ್ಯ ಯೋಜನೆಗಳನ್ನು ತಯಾರಿಸುತ್ತಿರುವಾಗ ಸಹಾಯ ಮಾಡಬೇಕು.
- ಸೂಕ್ಷ್ಮ ಮತ್ತು ಅವಕಾಶ ವಂಚಿತ ಸಮುದಾಯದವರಿಗೆ ಆರೋಗ್ಯ ಮತ್ತು ಪೌಷ್ಠಿಕಾಂಶ ಸೇವೆಗಳು ಸಿಗುತ್ತಿವೆ ಎಂಬುದನ್ನು ಖಚಿತಪಡಿಸಬೇಕು.